O.S .No. 9/2019
PW-1

ದಿನಾಂಕ: 12-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಎಲ್.ಜಿ. ವಕೀಲರಿಂದಃ</u>

ದಾವಾ ಆಸ್ತಿಯ ದಕ್ಷಿಣಕ್ಕಿರುವ ನಿವೇಶನ ಸಂ.123 ರ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಉತ್ತರಕ್ಕಿರುವ ನಿವೇಶನ ಸಂ.125 ರ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಗೊತ್ತಿಲ್ಲ, ಖಾಲಿ ಬಿದ್ದಿದೆ ಎಂದು ಹೇಳುತ್ತಾರೆ. ನಿಪಿ-5 ರಂತೆ ದಿಃ19.09.2018 ರಂದು 1, 3 ಮತ್ತು 4 ನೇ ಪ್ರತಿವಾದಿಗಳಿಗೆ ನಿಮ್ಮ ವಕೀಲರಿಂದ ತಿಳುವಳಿಕೆ ಪತ್ರ ನೀಡಿರುತ್ತೀರಿ ಎಂದರೆ ಸರಿ. ನಿಪಿ-5 ನ್ನು ಯಾವ ವಿಚಾರವಾಗಿ ನೋಟೀಸ್ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ನಮ್ಮ ಆಸ್ತಿ ನಮಗೆ ಬರಬೇಕೆಂದು ಕೇಳಿ ಕೊಟ್ಟಿದ್ದೆ ಎಂದು ಹೇಳುತ್ತಾರೆ. ಪ್ರತಿವಾದಿ 3 ಮತ್ತು 4 ರವರಿಗೆ ದಾವಾ ನಿವೇಶನವನ್ನು ಗುರುತಿಸಿಕೊಡುವಂತೆ ಕೋರಿ ನಿಪಿ-5 ರಂತೆ ನೋಟೀಸ್ ನೀಡಿರುತ್ತೀರಿ ಎಂದರೆ ಸುಳ್ಳು.

ನಿಪಿ-5 ರಂತೆ ನೀಡಿದ ನೋಟೀಸಿಗೆ 1 ನೇ ಪ್ರತಿವಾದಿ ಪ್ರತ್ಯುತ್ತರ ತಿಳುವಳಿಕೆ ಪತ್ರವನ್ನು ನಿಮಗೆ ನೀಡಿರುತ್ತಾರೆ ಎಂದರೆ ಸುಳ್ಳು. ನಿಪಿ-6 ರಂತೆ ಪ್ರತ್ಯುತ್ತರ ನೋಟೀಸಿನಲ್ಲಿ 1 ನೇ ಪ್ರತಿವಾದಿಯ ವಾಸ ಇರುವ ಆಸ್ತಿಯ ಚೆಕ್ಕುಬಂಧಿಗೂ ಹಾಗೂ ದಾವಾ ಆಸ್ತಿಯ ಚೆಕ್ಕುಬಂಧಿಗೂ ತಾಳೆ ಇಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸುಳ್ಳು. ದಾವಾ ಆಸ್ತಿಗೂ ಹಾಗೂ 1 ನೇ ಪ್ರತಿವಾದಿ ವಾಸ ಇರುವ ನಿವೇಶನಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸಾಕ್ಷಿ ಅವರು ವಾಸವೇ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿದ್ದು, ಅದರಲ್ಲಿ ಕಾಣುವವರು ಯಾರು ಎಂದರೆ ಸಾಕ್ಷಿ ಅವರೇ ಇರಬಹುದು, ನನಗೆ ಕಾಣುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಿದ್ದು, ಅದರಲ್ಲಿ ಕಾಣಿಸುವ ವ್ಯಕ್ತಿ ಯಾರು, ನ್ಯಾಯಾಲಯದ ಮುಂದಿರುವ 1 ನೇ ಪ್ರತಿವಾದಿಯೇ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸದರಿ ಪೋಟೋಗಳಲ್ಲಿರುವ 1 ನೇ ಪ್ರತಿವಾದಿಯನ್ನು ಗುರುತಿಸಿದ ಮೇರೆಗೆ ಅವುಗಳನ್ನು ನಿಡಿ-**1** ಮತ್ತು **2** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಿದ್ದು, ಅದರಲ್ಲಿ ಕಾಣಿಸುವ ಮನೆ ದಾವಾ ಆಸ್ತಿಯಲ್ಲಿ ಕಟ್ಟಲಾಗಿದೆ ಎಂದರೆ ಸಾಕ್ಷಿ ಈಗ ಒಂದೂವರೆ

ವರ್ಷಗಳ ಹಿಂದೆ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿ ಗುರುತಿಸಿದ ಭಾವಚಿತ್ರವನ್ನು **ನಿಡಿ-3** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಿದ್ದು, ಅದು 1 ನೇ ಪ್ರತಿವಾದಿ ಕಟ್ಟಿರುವ ಮನೆಯ ಒಳಾಂಗಣ ಎಂದರೆ ಸಾಕ್ಷಿ ಹೌದು ಎಂದು ಗುರುತಿಸಿದ್ದು, ಅದನ್ನು **ನಿಡಿ-4** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಿದ್ದು, ಅದು 1 ನೇ ಪ್ರತಿವಾದಿ ಕಟ್ಟಿರುವ ಮನೆಯ ಅಡುಗೆ ಮನೆ ಎಂದರೆ ಸಾಕ್ಷಿ ಹೌದು ಎಂದು ಗುರುತಿಸಿದ್ದು, ಅದನ್ನು **ನಿಡಿ-5** ಎಂದು ಗುರುತಿಸಲಾಯಿತು. 2004 ರಿಂದಲೇ 1 ನೇ ಪ್ರತಿವಾದಿ ಮತ್ತು ಕುಟುಂಬದವರು ಶಿಟ್ ಮನೆ ಕಟ್ಟಿಕೊಂಡು ವಾಸ ಇದ್ದಾರೆಂದರೆ ಸುಳ್ಳು. 1 ನೇ ಪ್ರತಿವಾದಿ ತನ್ನ ಮನೆಯನ್ನು ಬಿಟ್ಟು ಕೊಡುತ್ತೇನೆಂದು ಯಾರ ಸಮಕ್ಷಮ, ಯಾವ ತಿಂಗಳು, ದಿನಾಂಕ, ವರ್ಷದಂದು ಹೇಳಿದರು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಪ್ರತಿವಾದಿಗಳಿಗೆ ವಾಸ ಮಾಡಲು ಯಾವುದೇ ಸ್ವಂತ ಮನೆ ಇಲ್ಲ ಎಂದರೆ ಸುಳ್ಳು.

ನಿಮಗೆ ಸೇರಿದ ಸ್ವಂತ ಮನೆ, ಜಮೀನು ಮತ್ತು ನಿವೇಶನ ಇದೆ ಎಂದರೆ ಸಾಕ್ಷಿ ಜಮೀನು, ನಿವೇಶನ ಇಲ್ಲ ಎಂದು ಹೇಳುತ್ತಾರೆ. ನೀವು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸದೃಢರಾಗಿದ್ದು, ದಾವೆಗೋಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ಧ ಯಾವಾಗ ದೂರು ದಾಖಲಿಸಿದ್ದೀರಿ ಎಂದರೆ ಸಾಕ್ಷಿ 2018 ರಲ್ಲಿ ಎಂದು ಹೇಳುತ್ತಾರೆ. ನೀವು ದೂರನ್ನು ಎಲ್ಲಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಪೊಲೀಸ್ ಠಾಣೆಯಲ್ಲಿ ಕೊಟ್ಟಿದ್ದು, ಯಾವ ಠಾಣೆ ಎಂದು ಗೊತ್ತಿಲ್ಲ, ನನ್ನ ಯಜಮಾನರು ಕರೆದುಕೊಂಡು ಹೋಗಿದ್ದರು ಎಂದು ಹೇಳುತ್ತಾರೆ. ದೂರು ಕೊಟ್ಟ ಬಗ್ಗೆ ಏನಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅವರು ನೋಟೀಸನ್ನು ಅಂಟಿಸಿ ಬಂದಿದ್ದರು, 1 ನೇ ಪ್ರತಿವಾದಿ ಖಾಲಿ ಮಾಡಿ ಕೊಡಲಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ವಿರುದ್ಧ ದೂರು ಕೊಟ್ಟಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಪಿ-1 ನ್ನು ನೀವು ಸೃಷ್ಟಿ ಮಾಡಿಕೊಂಡಿದ್ದೀರಾ ಎಂದರೆ ಸುಳ್ಳು. ದಾವಾ ಹೂಡುವ ಕಾಲಕ್ಕೆ ನಿಪಿ-2 ಮತ್ತು 3 ನ್ನು ಕಟ್ಟಿರುತ್ತೀರಾ ಎಂದರೆ ಸರಿ. ನಿಪಿ-1 ರಂತೆ ಖಾತೆ ಮಾಡಿಕೊಡುವಂತೆ ಕೋರಿ ಅರ್ಜಿಯನ್ನು ಯಾವಾಗ ಕೊಟ್ಟಿದ್ದು ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಎಂದು ಹೇಳುತ್ತಾರೆ. ನಿಪಿ-1 ರಿಂದ 5 ದಾವೆಗೋಸ್ಕರ ಸೃಷ್ಟಿ ಮಾಡಿಕೊಂಡ ದಾಖಲೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ,

ಪ್ರತಿವಾದಿಗಳನ್ನು ದಾವಾ ಆಸ್ತಿಯಿಂದ ಕಾನೂನು ಬಾಹಿರವಾಗಿ ಹೊರ ಹಾಕಲು, ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು, ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸಿ ನಿವೇಶನವನ್ನು ಗುರುತಿಸಲು ನಿಮ್ಮದೇನು ತೊಂದರೆ ಇಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.